MYSORE LEGISLATIVE ASSEMBLY.

FIFTY-SECOND DAY.

Wednesday, 16th October 1957.

The House met in the Assembly Hall, Vidhana Soudha, Bangalore, on Wednesday the, 16th October 1957 at One of the Clock.

MR. DEPUTY SPEAKER (SRI L. H. THIMMA BOVI, B.A.) in the Chair.

QUESTIONS AND ANSWERS

Construction of tank near Gandikere, Hagalwadi Hobli.

Q.—843. Sri T. TARE GOWDA (Sira).—

Will the Government be pleased to state:—

(*a*) whether an estimate has been prepared to construct a tank near Gandikere, Hagalwadi hobli, Gubbi taluk;

(*b*) if so, the amount and the acreage proposed;

(*c*) the number of acres in Sira taluk that would be brought under wet cultivation?

A.— Sri H. K. VEERANNA GOWDH (Minister for Public Works).—

(*a*) Yes.

(*b*) Rs. 5,10,000.
Acreage: 290 Acres.

(*c*) 58 Acres.

ಶ್ರೀ ಟಿ. ತಾರೇಗೌಡ.—ಈ ಕೆರೆಯ ಅಂದಾಜನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆಯೇ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಮೂರು ಕೆರೆಗಳಿವೆ. ತಾವು ಕೇಳುವುದು ಯಾವ ಕೆರೆಗೆ ಸಂಬಂಧಪಟ್ಟ ವಿಷಯ?

ಶ್ರೀ ಟಿ. ತಾರೇಗೌಡ.—ಗಂಡೀಕೆರೆಯ ಬಳಿ ಇರುವ ಕೆರೆಯ ವಿಷಯವೆಂದು ಪ್ರಶ್ನೆಯಲ್ಲಿಯೇ ಕೇಳಿದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಇನ್ನೂ ಅಂದಾಜು ಮಂಜೂರಾಗಿಲ್ಲ.

ಶ್ರೀ ಟಿ. ತಾರೇಗೌಡ.—ಈ ಅಂದಾಜನ್ನು ಜಾಗ್ರತೆ ಮಂಜೂರು ಮಾಡುತ್ತೀರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈಗ ಕೆಲವು ರೈತರಿಂದ ಮುಚ್ಚಳಿಕೆ ಬರೆಸಿಕೊಳ್ಳಬೇಕು. ಅಚ್‌ಕಟ್ ಸ್ಪೇಟ್‌ಮೆಂಟ್ ಆಗಬೇಕು. ಆ ಸ್ಪೇಟ್‌ಮೆಂಟ್ ಈಗಾಗಲೇ ಕಳುಹಿಸಿದ್ದಾರೆಂದು ಈಚೆಗೆ ವರದಿ ಬಂದಿದೆ. ಆದ್ದರಿಂದ ಫಾರ್ಮರ್ ಎಕ್ಕೈರಿ ನಷ್ಟದಮೇರೆ ಆ ಅಂದಾಜನ್ನು ಮಂಜೂರುಮಾಡಲು ತೆಗೆದುಕೊಳ್ಳುತ್ತೇವೆ.

ಶ್ರೀ ಟಿ. ತಾರೇಗೌಡ.—ಈ ಪ್ರದೇಶ ಬಹಳ ಅಭಾವ ಪ್ರದೇಶವಾಗಿರುವುದರಿಂದ ಅಲ್ಲಿನ ಜನಗಳಿಗೆ ನೀರಾವರಿ ಸೌಕರ್ಯ ಇಲ್ಲದೇ ಇರುವುದರಿಂದ ಸರ್ಕಾರದವರು ಅದಷ್ಟು ಜಾಗ್ರತೆ ಈ ಅಂದಾಜನ್ನು ಮಂಜೂರು ಮಾಡುವರೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಉದ್ದೇಶವೇ ಅದು.

I.A.S. and I.P.S. Officers Belonging to Scheduled Castes and Scheduled Tribes in the State.

Q.—1228. Sri N. RACHIAH (Hunsur—Scheduled Castes).—

Will the Government be pleased to state:—

(*a*) the number of I.A.S. and I.P.S. Officers in the new Mysore State;

(*b*) the number of them belonging to Scheduled Castes and Scheduled Tribes?

A.— Sri S. NIJALINGAPPA (Chief Minister).—

(*a*) The number of I.A.S. and I.P.S. Officers in the State is 78 and 41 respectively.

(*b*) One officer in the I.A.S. cadre. None in the I.P.S. cadre.

*Asterisk indicates that the remarks or speeches have not been revised by the Member concerned.

Sri N. RACHIAH.—May I know, Sir, the basis on which the selections to these cadres are made from the State Services?

*Sri S. NIJALINGAPPA.—It is on eligibility and merit.

Sri N. RACHIAH.—If it is on merit and eligibility, may I know whether the selections are amounting to recruitment or promotion?

Sri S. NIJALINGAPPA.—When promotions are made to I.A.S. and I.P.S. cadres, the Central representatives and the Secretaries here sit in a committee and on the basis of eligibility and merit, these promotions are made.

Sri N. RACHIAH.—May I know how many officers of the State were on this Committee and how many officers of the Central Government or the UPSC were deputed to conduct these selections?

Sri S. NIJALINGAPPA.—The Chairman of the UPSC will usually be there. But as to what happened last year, I want notice of the question.

Sri N. RACHIAH.—May I know why the claims of the seniormost officers of the Secheduled Castes working in the Revenue Department and the Police Department some of whom were actually recruited to the Civil Service in the beginning were ignored while making the selections to these cadres, while very unqualified and juniormost officers of non-scheduled castes have been promoted to these cadres?

Sri S. NIJALINGAPPA.—I am not aware of any such discrimination having been made. If my friend brings to my notice any particular instance, I can see if the matter can be redressed, because it is a question settled by the UPSC and the State Government.

Sri N. RACHIAH.—Are the Government aware that the Scheduled Caste officer whose serial number in the Inter-State seniority list was 35 was overlooked while non-Scheduled Caste officers whose sl. nos. were 75 and 39 were promoted to the I.A.S, and if so, will the Government see that the seniority is kept up?

Sri S. NIJALINGAPPA.—I will just look into the matter, if my friend brings it to my notice.

Sri B. RACHIAH.—Is it not a fact that the State Government propose the names of the officers who are to be promoted to the I.A.S. cadre?

Sri S. NIJALINGAPPA.—A list is sent and the names in the list will be considered. Let me assure my friend that no discrimination has ever been made while lists are put up.

Sri B. RACHIAH.—Are the Government aware that great injustice has been done to the Scheduled Caste officers, Sir?

Sri S. NIJALINGAPPA.—It is a matter of opinion.

Sri N. RACHIAH.—May I know whether the Government have proposed certain names apart from the selections made by the Committee and if so, what are the names of such officers whose cases have been recommended by the State Government to the UPSC?

Sri S. NIJALINGAPPA.—Let my friend put another question. If possible, I will study files and give it. But let me say that recently we have made certain strong recommendations for promotions of officers belonging to Scheduled Castes and that is being looked into.

Sri N. RACHIAH.—Is it a fact that the Union Government have directed the State Government to select more and more of Scheduled Caste candidates for the I.A.S. and I.P.S. cadres and if so, what is the action taken by the Government?

Sri S. NIJALINGAPPA.—I am not aware of such a direction.

Sri N. RACHIAH.—May I know whether the Government are aware that as per constitutional provisions, and the directives of the Union Government, in other States, the State Governments Scheduled Caste officers who are qualified and who are eligible are promoted and then they seek the approval of the Union Government and the approval of the UPSC?

Sri S. NIJALINGAPPA.—I am not aware of such a procedure.

Sri N. RACHIAH.—If it is so, will this State Government also follow such a procedure in the of Scheduled Caste officers?

Sri S. NIJALINGAPPA.—I am not sure if there is any such procedure

adopted by other States. If my friend kindly brings it to my notice, I will certainly look into it.

Sri G. VENKATAI GOWDA.—Would the Government consider some relaxations so far as Scheduled Castes are concerned in recommending names to the I.A.S.?

Sri S. NIJALINGAPPA.—We are making the recommendations keeping in view the interests of the Scheduled Castes also. It is for the Commission to make the selections.

Construction of M.L.A.s' Hostel.

Q.—1285. Smt. BASAVARAJESWARI (Manvi).—

Will the Government be pleased to state:—

(*a*) whether there is any proposal before them to construct an M.L.A.s' Hostel;

(*b*) if so, the amount sanctioned and the time required to commence the work?

A.—Sri H. K. VEERANNA GOWDH (Minister for Public Works).—

(*a*) Yes.

(*b*) The proposal is still under consideration.

ಶ್ರೀಮತಿ ಬಸವರಾಜೇಶ್ವರಿ.—ಬೆಂಗಳೂರಿಗೆ ಶಾಸನ ಸಭೆ ನಡೆಯುವ ಕಾಲದಲ್ಲಿ ಬರತಕ್ಕ ಶಾಸನ ಸಭಾ ಸದಸ್ಯರುಗಳಿಗೆ ವಾಸಕ್ಕೆ ಸರಿಯಾದ ವಸತಿ ಸೌಕರ್ಯಗಳಿಲ್ಲವೆ ತುಂಬ ಅನಾನುಕೂಲವಾಗಿದೆ ಎಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಆ ಅನಾನುಕೂಲಗಳನ್ನು ಸರ್ಕಾರದವರು ಆದಷ್ಟು ಬೇಗ ನಿವಾರಣೆ ಮಾಡಬೇಕೆಂದಿರುತ್ತಾರೆ.

ಶ್ರೀಮತಿ ಬಸವರಾಜೇಶ್ವರಿ.—ಸರ್ಕಾರದವರು ತೀವ್ರವಾಗಿ ವಸತಿಯ ಕಟ್ಟಡಗಳನ್ನು ಕಟ್ಟಿಸಲು ಏರ್ಪಾಡು ಮಾಡುತ್ತೀರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಮಾಡುತ್ತಿದ್ದೇವೆ.

ಶ್ರೀಮತಿ ಬಸವರಾಜೇಶ್ವರಿ.—ಫ್ಯಾಮಿಲಿ ಕ್ವಾರ್ಟರ್ಸುಗಳನ್ನು ಕಟ್ಟಿಸಲು ಆಲೋಚನೆ ಮಾಡಿದ್ದೀರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಒಬ್ಬೊಬ್ಬರು ಇರಲು ಅನುಕೂಲವಾದಂಥ ಮತ್ತು ಇಬ್ಬರು ಇರಲು ಅನುಕೂಲವಿರುವಂಥ ಕೆಲವು ಕಟ್ಟಡಗಳನ್ನು ಕಟ್ಟಿಸಬೇಕೆಂಬ ಆಲೋಚನೆ ಇದೆ.

Sri G. SIVAPPA.—May I know since what time the proposal is under consideration?

ಶ್ರೀ ಎಚ್. ಕೆ. ವೀರಣ್ಣಗೌಡ.—ಸ್ವಾಮಿ, ಈಬಗ್ಗೆ ಮುಂದೆ ಹೆಚ್ಚು ಉಪಪ್ರಶ್ನೆಗಳನ್ನು ಕೇಳಲು ಅವಕಾಶ ವಿಲ್ಲದಂತೆ ಮಾಡಲು ನಾನು ಸ್ವಲ್ಪ ವಿವರವಾಗಿಯೇ ಉತ್ತರ ಹೇಳಿಬಿಡಬೇಕೆಂದಿದ್ದೇನೆ. ಶಾಸನ ಸಭಾ ಸದಸ್ಯರುಗಳಿಗೆ ಅನುಕೂಲವಾದ ಕೆಲವು ಭವನಗಳನ್ನು ಕಟ್ಟಿಸಬೇಕೆಂಬ ಆಲೋಚನೆ ಬಹಳ ದಿವಸಗಳಿಂದಲೂ ಸರ್ಕಾರದವರ ಪರಿಶೀಲನೆಯಲ್ಲಿತ್ತು. ಈಬಗ್ಗೆ ಕಳೆದ ಸಾಲಿನಲ್ಲಿ 26 ಲಕ್ಷ ರೂಪಾಯಿಗಳಿಗೆ ಸಿದ್ಧಪಡಿಸಿದ್ದ ಒಂದು ಅಂದಾಜು ಪರಿಶೀಲನೆಗೆ ಬಂದಿತ್ತು. ಆಲ್ಲಿ ಸರ್ಕಾರದವರು ಆ ವೆಚ್ಚ ಬಹಳವಾಯಿತೆಂದೂ, ಮತ್ತು ದೇಶ ಇನ್ನು ಸ್ವಲ್ಪ ದಿವಸಗಳಲ್ಲೇ ಇನ್ನೂ ದೊಡ್ಡದಾಗುವುದಿದೆ, ಆಗ ಈ ಪ್ರಶ್ನೆಯನ್ನು ಪರಿಶೀಲನೆ ಮಾಡಿದರಾಯಿತೆಂದೂ ಆಗ ಪ್ರಶ್ನೆಯನ್ನು ಹಿಂದಕ್ಕೆ ಹಾಕಲಾಗಿತ್ತು. ಇತ್ತೀಚೆಗೆ ಈಗಿರತಕ್ಕ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಆ 26 ಲಕ್ಷ ರೂಪಾಯಿಗಳಿಗೆ ತಯಾರಿಸಿದ್ದ ಅಂದಾಜನ್ನು ಸ್ವಲ್ಪ ಕಡಮೆ ಮಾಡಲು ಮಾನ್ಯ ಮುಖ್ಯ ಮಂತ್ರಿಗಳೂ, ನಾನೂ ಮತ್ತು ಚೀಫ್ ಇಂಜಿನಿಯರ್ ಅವರೂ ಎಲ್ಲರೂ ಸ್ಥಳ ಪರಿಶೀಲನೆಮಾಡಿ ಈಗಿರತಕ್ಕ ಆ ರೆಸಿಡೆನ್ಸಿ ಭವನದ ಹಿಂಭಾಗದಲ್ಲಿ ಸುಮಾರು ಒಂದುನೂರು ಜನ ಸದಸ್ಯರಿಗೆ ಒಬ್ಬೊಬ್ಬರಿರಲು ಅನುಕೂಲವುಳ್ಳಂಥ 100 ಕಟ್ಟಡಗಳನ್ನೂ ಮತ್ತು ಸಂಸಾರ ಸಹಿತ ಬರುವವರಿಗೆ ಇಬ್ಬರಿರಲು ಯೋಗ್ಯವಾದಂಥ 80 ಕಟ್ಟಡಗಳನ್ನೂ ಕಟ್ಟಿಸಲು ಅಂದಾಜು ಮಾಡಲಾಗಿದೆ. ಈ ಬಗ್ಗೆ ಒಂದು ನಕ್ಷೆ ಮತ್ತು ಪ್ಲಾನುಗಳೆಲ್ಲಾ ತಯಾರಾಗಿವೆ. ಆವುಗಳನ್ನು ಸಂಬಂಧಪಟ್ಟ ಅಸೆಂಬ್ಲಿ ಆಫೀಸಿಗೆ ಮುಂದಿನ ಕಾರ್ಯಕ್ರಮಗಳನ್ನು ಕೈಗೊಳ್ಳತಕ್ಕ ಬಗ್ಗೆ ಕಳುಹಿಸಲಾಗಿತ್ತು. ಈ ಪ್ಲಾನುಗಳನ್ನೆಲ್ಲಾ ಶಾಸನ ಸಭಾ ಅಧ್ಯಕ್ಷರೂ ಮತ್ತು ಹಣಕಾಸಿನ ಶಾಖೆಯ ಅಧ್ಯಕ್ಷರೂ ಒಪ್ಪಬೇಕಾಗಿತ್ತು. ಆದರೆ ಈಗ ಈ ಫಾರ್ಮ್ಯಾಲಿಟೀಸ್‌ಗಳೆಲ್ಲಾ ಮುಗಿದು ಸರ್ಕಾರದ ಮಂಜೂರಾತಿ ಪಡೆಯುವ ಘಟಕ್ಕೆ ಬಂದಿದೆ. ಸದ್ಯದಲ್ಲಿ ಕೆಲಸ ಪ್ರಾರಂಭವಾಗಬಹುದು.

Sri G. SIVAPPA.—May I know the estimated cost of the revised plan?

ಶ್ರೀ ಎಚ್. ಕೆ. ವೀರಣ್ಣಗೌಡ.—ಈಗ ಸುಮಾರು 12 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಒಬ್ಬರಿರುವಂಥ ಮತ್ತು ಇಬ್ಬರು ಸದಸ್ಯರುಗಳಿರುವಂಥ ಕಟ್ಟಡ ಕಟ್ಟಿಸಲು ಅಂದಾಜು ತಯಾರಾಗಿದೆ.

ಶ್ರೀ ಎಸ್. ಜಿ. ನರಸಿಂಹೇಗೌಡ.—ಈ ಯೋಜನೆ ಈ ತನಕ ನಿಧಾನವಾಗಲು ಕಾರಣವೇನು?

ಶ್ರೀ ಎಚ್. ಕೆ. ವೀರಣ್ಣಗೌಡ.—ನಾನಾಗಲೇ ಈ ಬಗ್ಗೆ ದೀರ್ಘವಾಗಿ ವಿವರಣೆಗಳನ್ನು ಕೊಟ್ಟಿದ್ದೇನೆ. ಅದನ್ನು ಪುನರಪಿ ಹೇಳಲು ಇಷ್ಟಪಡುವುದಿಲ್ಲ. ಕೆಲವು ನಿಯಮಗಳನ್ನು ಅನುಸರಿಸಬೇಕಾಗಿರುವ ಪ್ರಯುಕ್ತ ಇಷ್ಟುಕಾಲ ಹಿಡಿಯಿತು. ಈಗಾಗಲೇ ಇದಕ್ಕೆ ಸರ್ಕಾರದ ಅನುಮತಿ ದೊರಕಿದೆ ಎಂದು ತಿಳಿಸಿದರೆ ಸಾಕು.

ಶ್ರೀ ರೇವಣಸಿದ್ದಪ್ಪ.—ಈ ಶಾಸನ ಸಭಾ ಸದಸ್ಯರ ಸಂಖ್ಯೆ 208 ಇದೆ. ಈ ಪೈಕಿ ತಾವು 80 ಸಂಸಾರಿ ಕಟ್ಟಡಗಳನ್ನ ಕಟ್ಟಿಸಲಾಗುತ್ತದೆಂದು ಹೇಳೋಣವಾಯಿತು. ಎಂದರೆ ಇನ್ನುಳಿದವರೆಲ್ಲಾ ಸಂಸಾರಿಗಳಲ್ಲವೆಂದು ತಾವು ಭಾವಿಸಿದ್ದೀರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇಂಥ ಪ್ರಶ್ನೆಗಳನ್ನು ಹಾಕಿದರೆ ನಾನು ಏನು ಉತ್ತರ ಕೊಡುವುದು? ಕೆಲವರು ಸಂಸಾರ ಕರೆದುಕೊಂಡು ಬರುತ್ತಾರೆ. ಇನ್ನು ಕೆಲವರು ಕರೆದುಕೊಂಡು ಬರುವುದಿಲ್ಲ. ಆದ್ದರಿಂದ ಸದ್ಯಕ್ಕೆ ಈ ಅಂದಾಜು ಮಾಡಿದೆ.